# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 1253(1420)

ಮಾನ್ಯ ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್

(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು :ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಉತ್ತರಿಸಬೇಕಾದ ದಿನಾಂಕ :16-03-2026

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿಕ್ಷಣ ಇಲಾಖೆಯ ಮಹಿಳಾ ಶಿಕ್ಷಕರಿಗೆ ಶಿಶುಪಾಲನೆ ರಜೆ/ ವಿಶೇಷ ಹಕ್ಕಿನ ರಜೆ/ ಗಳಿಕೆ ರಜೆ ಸರಾಸರಿ ವೇತನದ ಮೇಲೆ ಫಾರ್ಲೊ ಜರ ವೈದ್ಯ ಪ್ರಮಾಣ ಪತ್ರದ ಮೇಲೆ ಸರಾಸರಿ ವೇತನದ ರಜೆ/ ಅರ್ಧ ಸರಾಸರಿ ವೇತನದ ಮೇಲೆ ಪರಿವರ್ತಿತ ರಜೆ/ಅರ್ಧ ವೇತನದ ರಜೆ ಬಾಕಿ ಇಲ್ಲದ ರಜೆ/ ಅಸಾಧರಣ ರಜೆಗಳ "ಅವಧಿ ಮುಕ್ತಾಯವಾದ ನಂತರ ಶಿಕ್ಷಕರು ಕರ್ತವ್ಯಕ್ಕೆ ಹಾಜರಾಗಲು ಇರುವ ಮಾನದಂಡವೇನು; | ಕರ್ನಾಟಕ ನಾಗರೀಕ ಸೇವಾ ನಿಯಮ 159(ಎ)ರ ಮೇರೆಗೆ ಮಂಜೂರು ಮಾಡಲಾದ ರಜೆಯು ಮುಗಿಯುವುದಕ್ಕೆ ಮುಂಚಿತವಾಗಿ ಕರ್ತವ್ಯಕ್ಕೆ ಹಾಜರಾದರ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಹಾಜರಾಗಬೇಕು ಹಾಗೂ ಮುಗಿದ ನಂತರ ಹಾಜರಾದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡಬೇಕು.<br>ಒಂದು ವೇಳೆ ವೈದ್ಯಕೀಯ ಕಾರಣಗಳಿಗಾಗಿ ರಜೆ ಪಡೆದಿದ್ದಲ್ಲಿ, ಕರ್ನಾಟಕ ನಾಗರೀಕ ಸೇವಾ ನಿಯಮ 160 ರ ಮೇರೆಗೆ ಕರ್ತವ್ಯಕ್ಕೆ ಮರಳುವಾಗ ಸರ್ಕಾರಿ ನೌಕರನು ನಿಗಧಿತ ನಮೂನೆಯಲ್ಲಿ ದೈಹಿಕ ಕ್ಷಮತೆ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಮೊದಲು ಹಾಜರುಪಡಿಸದೆ ಕರ್ತವ್ಯಕ್ಕೆ ಪುನ: ಹಾಜರಾಗಕೊಡದು.<br>ಪ್ರಾಥಮಿಕ ಮತ್ತು ಪ್ರೌಢ ಶಾಲಾ ಸಹ ಶಿಕ್ಷಕರು ರಜೆಯನ್ನು ಮಂಜೂರಾತಿ ಪ್ರಾಧಿಕಾರದ ಪೂರ್ವಾನುಮತಿ ಪಡೆದು, ರಜೆ ನಂತರ ರಜೆ ಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಾಧಿಕಾರಕ್ಕೆ ವರದಿ ಮಾಡಿಕೊಳ್ಳಬೇಕು. |
| ಆ) | ಮೇಲ್ಕಾಣಿಸಿ ರಜೆ ಅವಧಿ ನಂತರ ಕರ್ತವ್ಯಕ್ಕೆ ಹಾಜರಾಗಲು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ಚಲನಾದೇಶ ಅಥವಾ ಅನುಮತಿ ಅವಶ್ಯಕತೆ ಇದೆಯೇ; | ಸಹ ಶಿಕ್ಷಕರು ರಜೆ ಅವಧಿ ನಂತರ ಶಿಕ್ಷಣಾಧಿಕಾರಿಗಳ ಅನುಮತಿ ಕ್ಷೇತ್ರ ಪಡೆಯುವ ಅಗತ್ಯವಿರುವುದಿಲ್ಲ.<br>ವರ್ಗಾವಣೆಯಾದ ಸಂದರ್ಭದಲ್ಲಿ ಪಡೆದ ರಜೆಗಾಗಿ ಚಾಲನಾದೇಶ ಅವಶ್ಯಕತೆ ಇದೆ. |
| ಇ) | ಇದ್ದಲ್ಲಿ, ಶಿಕ್ಷಕರು ಯಾವ ಯಾವ ರಜೆಗಳಿಗೆ ಚಲನಾದೇಶ ಅಥವಾ ಅನುಮತಿ ಪಡೆಯಬೇಕು; | |

| | | |
|---|---|---|
| ಈ) | ಇಲ್ಲದಿದ್ದಲ್ಲಿ, ಕೊಪ್ಪಳ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರಿಗೆ ಸೂಕ್ತ ಮಾಹಿತಿ ನೀಡಲು ಯಾವ ಕ್ರಮ ಜರಗಿಸಲಾಗಿದೆ? | ಮೇಲಿನ ಉಪ ಪ್ರಶ್ನೆಗಳಲ್ಲಿ ವಿವರಿಸಿರುವ ಮಾಹಿತಿಯು ಸಾರ್ವತ್ರಿಕವಾಗಿ ಇಲಾಖೆಯ ಎಲ್ಲಾ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಉಪನಿರ್ದೇಶಕರಿಗೆ ಅನ್ವಯವಾಗುತ್ತದೆ. |

**ಇಪಿ 55 ಪಿಎಂಎ 2026**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ

ಸಚಿವರು